ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.
ಸಿ.ಸಿ. ನಂಃ **152 /2021**

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ
ಗುರುಮಠಕಲ್ ಪೋಲಿಸ್ ಠಾಣೆ

// ವಿರುದ್ಧ //

ಆರೋಪಿತರು ಃ ಮಲ್ಲಣ್ಣ @ ಮಲ್ಲಪ್ಪ ಮತ್ತು ಇನ್ನೊಬ್ಬರು.

ದೋಷಾರೋಪಣೆ

ನಾನು ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರಾದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕಃ 25.09.2020 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಗುರುಮಿಠಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 1 ನೇ ಆರೋಪಿತನು 3 ನೇ ಆರೋಪಿತನಾ ನೀವು ಹೇಳಿದಂತೆ ಸೊನಾಲಿಕಾ ಕಂಪನಿಯ ನೀಲಿ ಬಣ್ಣದ ಟ್ರ್ಯಾಕ್ಟರ್ ಇಂಜಿನ್ ನಂ.ಕೆಎ-33-ಟಿಎ-6386 ಹಾಗೂ ಟ್ರ್ಯಾಲಿ ನಂ.ಕೆಎ-33-ಟಿಬಿ-0431 ನೇದ್ದರಲ್ಲಿ ಮತ್ತು 2 ನೇ ಆರೋಪಿತನು 4 ನೇ ಆರೋಪಿತನಾದ ನೀವು ಹೇಳಿದಂತೆ ಮಹೇಂದ್ರ ಭೂಮಿಪುತ್ರ ಕಂಪನಿಯ ರೆಡ್ ಕಲರ್ ಟ್ರ್ಯಾಕ್ಟರ್ ಇಂಜಿನ್ ನಂ.ಕೆಎ-33-ಟಿಎ-9253 ಹಾಗೂ ಟ್ರ್ಯಾಲಿ ನಂ.ಕೆಎ-33-ಟಿಬಿ-1840 ನೇದ್ದರಲ್ಲಿ ಹತ್ತಿಕುಣಿ ಗ್ರಾಮದ ಹಿಂದ ಇರುವ ಸರ್ಕಾರಿ ಹಳ್ಳದಲ್ಲಿ ಅಕ್ರಮವಾಗಿ ಸರಕಾರಕ್ಕೆ ಯಾವುದೇ ರಾಧನ ತುಂಬದೆ ಮತ್ತು ಸಂಬಂಧಪಟ್ಟ ಇಲಾಖೆಯಿಂದ ರಾಯಲಿಟಿ ಪರವಾನಿಗೆಯನ್ನು ಪಡೆದುಕೊಳ್ಳದೇ ಮರಳನ್ನು ಕಳ್ಳತನದಿಂದ ತುಂಬಿಕೊಂಡು ಗುರುಮಠಕಲ್ ಪಟ್ಟಣದಲ್ಲಿ ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿದ್ದದ್ದು ಕಂಡುಬಂದಿದ್ದು, ಈ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

( ದೋಷಾರೋಪಣೆಯನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ)

ದಿನಾಂಕಃ **11.07.2025.**

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಯಾದಗಿರಿ.